**<u>ದಿನಾಂಕಃ 15-02-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ ಎನ್.ಎಸ್.ಬಿ. ವಕೀಲರಿಂದಃ ಪ್ರತಿವಾದಿ 2, 4 ರ ಪರಃ</u>**

ನಾನು ಎಸ್ ಎಸ್ ಎಲ್ ಸಿ ವರೆಗೆ ಓದಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಸ್ವತಃ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮದು ಹಿರೇ ನಂದಿಹಳ್ಳಿ ಎಂದರೆ ನಿಜ. ನನ್ನ ಮುಖ್ಯ ವಿಚಾರಣೆ ನಾನು ಹೇಳಿ ಬರೆಸಿದ್ದರೆ ಹೀರೆನಂದಿಹಳ್ಳಿ ಎಂದು ಬರೆಸುತ್ತಿದ್ದೆ ಎಂದರೆ ನಿಜ. ನನ್ನ ಮುಖ್ಯ ವಿಚಾರಣೆಯಲ್ಲಿ ರಾಮಗೊಂಡನಹಳ್ಳಿ ವಾಸ ಎಂದು ಬರೆಯಲಾಗಿದೆ ಎಂದರೆ ನಿಜ. ಅದು ಕಣ್ತಪ್ಪಿನಿಂದ ಆಗಿರುತ್ತದೆ. ಮುಖ್ಯ ವಿಚಾರಣೆಗೆ ನಾನು ಮಾಹಿತಿ ಕೊಟ್ಟಿರುವುದಿಲ್ಲ, ವಕೀಲರು ತಯಾರು ಮಾಡಿದ್ದನ್ನು ನಾನು ಬಂದು ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ನಮ್ಮ ತಂದೆ ಹಿರಿಯರವರು ಎಂದರೆ ನಿಜ. ನಮ್ಮ ತಂದೆಯವರನ್ನು ಈ ಪ್ರಕರಣದಲ್ಲಿ ಸಾಕ್ಷಿ ವಾಡಿಸಿರುವುದಿಲ್ಲ ಎಂದರೆ ನಿಜ. ನನ್ನ ಜನ್ಮ ದಿನಾಂಕ ನೆನಪಿರುವುದಿಲ್ಲ. ನಾನು ಹುಟ್ಟವಕ್ಕಿಂತ ಮೊದಲು ನಡೆದ ಘಟನೆಯ ಬಗ್ಗೆ ಸ್ವತಃ ಮಾಹಿತಿ ಇರುವುದಿಲ್ಲ ಎಂದರೆ ನಿಜ.

ನಮ್ಮ ಘರಾಣೆದ ಮೂಲ ಪುರುಷ ಹೇಮನಗೌಡ ಬಸನಗೌಡ ಪಾಟೀಲ ಎಂದರೆ ನಿಜ. ಅವರ ಹೆಂಡತಿ ಹೆಸರು ಮರಡೆವ್ವ ಎಂದರೆ ನಿಜ. ಅವರಿಗೆ ನನ್ನ ಅಜ್ಜ ಬಸನಗೌಡ ಮತ್ತು ಶಿವನಗೌಡ ಮಕ್ಕಳು ಎಂದರೆ ನಿಜ. ಹೇಮನಗೌಡ ದಿನಾಂಕಃ 28.01.1933 ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ನಿಜ. ಅವರ ಹೆಂಡತಿ ಮರಡೆವ್ವ ಈ ದಾವಾ ಸಲ್ಲಿಸುವ ಸುಮಾರು 25 ವರ್ಷದ ಮೊದಲು ಮೃತಪಟ್ಟಿರುತ್ತಾರೆ ಎಂದರೆ ನಿಜ. ನನ್ನ ಅಜ್ಜ ಬಸನಗೌಡ ದಿನಾಂಕಃ 23.11.1981 ರಂದು ಮೃತಪಟ್ಟಿರುತ್ತಾರೆ ಎಂದರೆ ನಿಜ. ಅವರ ಹೆಂಡತಿ ಹೆಸರು ಬಸವ್ವ ಎಂದು ಇರುತ್ತದೆ. ಬಸವ್ವ ಈ ದಾವೆ ಹಾಕುವ 4 ವರ್ಷ ಮೊದಲು ಮೃತಪಟ್ಟಿರುತ್ತಾರೆ ಎಂದರೆ ನಿಜ. ಬಸನಗೌಡಗೆ 2 ರಿಂದ 4 ನೇ ಪ್ರತಿವಾದಿ ಮಕ್ಕಳು ಎಂದರೆ ನಿಜ. ಶಿವನಗೌಡ 1 ನೇ ಪ್ರತಿವಾದಿ ಈ

ದಾವೆ ಸಲ್ಲಿಸಿದ ನಂತರ ಮೃತಪಟ್ಟರು ಎಂದರೆ ನಿಜ. ಶಿವನಗೌಡರ ಹೆಂಡತಿ ಹೆಸರು ಗೌರವ್ವ ಎಂದರೆ ನಿಜ. ಗೌರವ್ವ ಮೃತಪಟ್ಟಿರುತ್ತಾರೆ ಎಂದರೆ ನಿಜ. ಶಿವನಗೌಡಗೆ ಚನ್ನಬಸವ್ವ ಎಂಬ ಮಗಳು ಎಂದರೆ ನಿಜ. ಅವರು ಈ ದಾವೆಯ ವಾದಿ ಎಂದರೆ ನಿಜ. ವಾದಿ ಈ ವ್ಯಾಜ್ಯದಲ್ಲಿ ಮಾಗಣಿ ಮಾಡಿರುತ್ತಾರೆ ಎಂದು ನನಗೆ ತಿಳಿದಿರುತ್ತದೆ. ಸುಮಾರು 5-6 ಆಸ್ತಿಗಳಲ್ಲಿ ಹಿಸ್ಸೆ ಕೇಳಿ ದಾವೆ ಸಲ್ಲಿಸಿರುತ್ತಾರೆ. ನಾನು ಆಸ್ತಿಗಳ ವಿವರ ಓದಿರುತ್ತೇನೆ, ನೆನಪಿರುವುದಿಲ್ಲ.

ಮೂಲ ಪುರುಷ ಹೇಮನಗೌಡ ಮೃತಪಟ್ಟ ನಂತರ ಘರಾಣೆದ ಆಸ್ತಿಗಳು ಹಿರಿಯ ಮಗ ನನ್ನ ಅಜ್ಜನ ಹೆಸರಿಗೆ ಮಾತ್ರ ವರದಿ ಮುಖಾಂತರ ಖಾತೆ ಬದಲಾವಣೆ ಆಗಿದೆ ಎಂದರೆ ಸರಿಯಲ್ಲ. ಆಗ ಶಿವನಗೌಡ ಜೀವಂತ ಇದ್ದರು ಎಂದರೆ ನಿಜ. ಶಿವನಗೌಡ ಹೆಸರನ್ನು ಬಿಟ್ಟು ನನ್ನ ಅಜ್ಜ ಅವರ ಹೆಸರನ್ನು ಮಾತ್ರ ಹಾಕಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ವಾದಿ-ಪ್ರತಿವಾದಿಯರ ಒಟ್ಟು ಘರಾಣೆದ ಆಸ್ತಿಗಳು ಎಂದರೆ ಸರಿಯಲ್ಲ. 1997 ರಲ್ಲಿ ಆಸ್ತಿಗಳು ಹಿಸ್ಸೆ ಆಗಿರಬಹುದು. ಅವು ನಮ್ಮ ಅಜ್ಜ, ನಮ್ಮ ದೊಡ್ಡಪ್ಪ ಮತ್ತು ನಮ್ಮ ತಂದೆ ಹಿಸ್ಸೆ ಮಾಡಿಕೊಂಡಿರುತ್ತಾರೆ. ಈ ಬಗ್ಗೆ ಹಿಸ್ಸಾ ಪತ್ರ ಹಾಜರು ಪಡಿಸಿರುವುದಿಲ್ಲ. ನನ್ನ ಅಜ್ಜ ಮತ್ತು ಶಿವನಗೌಡ ಮಧ್ಯೆ ಹಿಸ್ಸೆ ಆದ ಬಗ್ಗೆ ದಾಖಲೆ ಇರುವುದಿಲ್ಲ. ಬ ಅನುಸೂಚಿತ 4 ನೇ ಆಸ್ತಿಯನ್ನು ಒಟ್ಟು ಕುಟುಂಬದ ಆಸ್ತಿಯ ಆದಾಯದಿಂದ ದಿನಾಂಕಃ 14.02.1977 ರಂದು ಶಿವನಗೌಡರ ಹೆಸರಿಗೆ ಖರೀದಿ ಮಾಡಲಾಗಿತ್ತು ಎಂದರೆ ಸರಿಯಲ್ಲ. ರಿ.ಸ.ನಂ. 10/1 ಆಸ್ತಿ ಒಟ್ಟು ಕುಟುಂಬದ ಆದಾಯದಿಂದ ನಮ್ಮ ಅಜ್ಜನ ಹೆಸರಿಗೆ ಖರೀದಿ ಮಾಡಲಾಗಿತ್ತು ಎಂದರೆ ಸರಿಯಲ್ಲ. ನಮ್ಮ ಅಜ್ಜ ಜೀವಿತ ಇರುವವರೆಗೂ ಶಿವನಗೌಡ, 2 ಮತ್ತು 3 ನೇ ಪ್ರತಿವಾದಿ ಹಾಗೂ ನಮ್ಮ ಅಜ್ಜ ಒಟ್ಟಾಗಿ ಇದ್ದರು ಎಂದರೆ ಸರಿಯಲ್ಲ. ನಮ್ಮ ಅಜ್ಜ ಮೃತಪಟ್ಟ ನಂತರ 4 ನೇ ಪ್ರತಿವಾದಿ ಆಸ್ತಿ ಹಕ್ಕು ಬಿಟ್ಟು ಕೊಟ್ಟ ಬಗ್ಗೆ ಯಾವುದೇ ದಾಖಲೆ ಹಾಜರು ಪಡಿಸಿರುವುದಿಲ್ಲ. ಆಸ್ತಿಯ ಖಾತೆ ಬದಲಾವಣೆ ಆಗುವ ಕಾಲಕ್ಕೆ 4 ನೇ ಪ್ರತಿವಾದಿಗೆ ನೋಟಿಸ್ಸು ಕೊಟ್ಟಿರುವುದಿಲ್ಲ ಎಂದರೆ ನಿಜ. ಈ ಕಾರಣದಿಂದ

4 ನೇ ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ ಹಕ್ಕು ಇದೆ ಎಂದರೆ ಸರಿಯಲ್ಲ. ಈಗಲೂ ದಾವಾ ಆಸ್ತಿಗಳು ವಾದಿ-ಪ್ರತಿವಾದಿಗಳ ಸಾಮೂಹಿಕ ಕಬ್ಜಾ ವಹಿವಾಟು ಇದ್ದಾವೆ ಎಂದರೆ ಸರಿಯಲ್ಲ.

ಶಿವನಗೌಡಗೆ ಸಾಯುವ ಕಾಲಕ್ಕೆ 90 ವರ್ಷ ಆಗಿತ್ತು ಎಂದರೆ ಸರಿಯಲ್ಲ. ದಾವೆ ಹಾಕುವ ಕಾಲಕ್ಕೆ ನಮ್ಮ ತಂದೆಗೆ 63 ವರ್ಷ, ನಮ್ಮ ದೊಡ್ಡಪ್ಪಗ 65 ವರ್ಷ ಆಗಿತ್ತು ಎಂದರೆ ನಿಜ. ಶಿವನಗೌಡ ನಮ್ಮ ತಂದೆಯ ಕಾಕಾ ಎಂದರೆ ನಿಜ. ಹೀಗಾಗಿ ಶಿವನಗೌಡ ನಮ್ಮ ತಂದೆಯಿಂದ 25 ವರ್ಷ ದೊಡ್ಡವರು ಎಂದರೆ ನಿಜ. ಅವರು ಸಹ ನಮ್ಮೊಂದಿಗೆ ನಮ್ಮ ಮನೆಯಲ್ಲಿದ್ದರು ಎಂದರೆ ಸರಿಯಲ್ಲ. ವಾದಿ ಈಗಲೂ ತವರು ಮನೆಗೆ ಬಂದು ಹೋಗಿ ಮಾಡುತ್ತಾರೆ ಎಂದರೆ ಈ ದಾವೆ ಸಲ್ಲಿಸಿದ ನಂತರ ಬರುತ್ತಿಲ್ಲ ಎಂದು ಹೇಳುತ್ತಾರೆ. 4 ನೇ ಪ್ರತಿವಾದಿ ಈಗಲೂ ನಮ್ಮ ಮನೆಗೆ ಬಂದು ಹೋಗು ಮಾಡುತ್ತಾರೆ. ರಿ.ಸ.ನಂ. 36 ನಿಡಿ-9 ರ ಪ್ರಕಾರ ಕಾರ್ಯನಿರ್ವಾಹಕ ಅಭಿಯೋಜಕರು ಉಪನೀರಾವರಿ ವಿಭಾಗ ಧಾರವಾಡರವರ ಹೆಸರಿಗೆ ಭೂ ಸ್ವಾಧೀನ ಪ್ರಕಾರ ನಮೂದಿಸಲಾಗಿದೆ ಎಂದರೆ ನಿಜ. ರಿ.ಸ.ನಂ. 26/1 ರ ಕಾರ್ಯನಿರ್ವಾಹಕ ಅಭಿಯೋಜಕರು ಉಪನೀರಾವರಿ ವಿಭಾಗ ಧಾರವಾಡರವರ ಹೆಸರಿಗೆ 01 ಎಕರೆ 13 ಗುಂಟೆ ಸ್ವಾಧೀನ ಆಗಿದೆ ಎಂದರ ನಿಜ. ಉಳಿದ 18 ಗುಂಟೆ ದಾವಾ ಅನುಸೂಚಿತ ಬ 5 ನೇ ಆಸ್ತಿ ಎಂದು ಸೇರಿಸಲಾಗಿದೆ ಎಂದರೆ ನಿಜ. ಪಂಚಾಯತಿ ಆಸ್ತಿಗಳು ಹಿಸ್ಸೆ ಆದ ಬಗ್ಗೆ ಯಾವುದೇ ದಾಖಲೆ ಹಾಜರು ಪಡಿಸಿರುವುದಿಲ್ಲ. ಈ ಆಸ್ತಿಗಳು ಸಹ ಖಾತೆ ಬದಲಾವಣೆ ಮಾಡುವಾಗ 4 ನೇ ಪ್ರತಿವಾದಿ ಮತ್ತು ವಾದಿಗೆ ನೋಟಿಸ್ಸು ಕೊಟ್ಟಿರುವುದಿಲ್ಲ ಎಂದರೆ ನಿಜ. ಈ ಎಲ್ಲಾ ಆಸ್ತಿಗಳು ಗ್ರಾಮ ಲೆಕ್ಕಾಧಿಕಾರಿಗಳನ್ನು ಹಿಡಿದುಕೊಂಡು ಮತ್ತು ಪಂಚಾಯತಿ ಅಧಿಕಾರಿಯನ್ನು ಹಿಡಿದುಕೊಂಡು ನಮ್ಮ ವರದಿ ಮೂಲಕ ಗೈರು ಕಾಯ್ದೆಶೀರ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ರಿ.ಸ.ನಂ. 10/3 ಆಸ್ತಿಯು ಒಟ್ಟು ಕುಟುಂಬದ ಆಸ್ತಿ ಆಗಿದ್ದರಿಂದ ಶಿವನಗೌಡಗೆ ದಾನ ಪತ್ರ ಮಾಡಿ ಕೊಡುವ ಹಕ್ಕು ಇರಲಿಲ್ಲ ಎಂದರೆ

ಸರಿಯಲ್ಲ. ಅದು ಅವರ ಸ್ವಯಾರ್ಜಿತ ಆಸ್ತಿ ಇರುತ್ತದೆ. ಅದು ಶಿವನಗೌಡರ ಸ್ವಯಾರ್ಜಿತ ಆಸ್ತಿ ಅಲ್ಲ ಎಂದರೆ ಸರಿಯಲ್ಲ. 2020 ರಲ್ಲಿ ಶಿವನಗೌಡಗೆ ತುಂಬಾ ವಯಸ್ಸಾಗಿದ್ದರಿಂದ ಅವರು ಏನು ಮಾಡುತ್ತಾರೆ ಎಂಬ ಜ್ಞಾನ ಇರಲಿಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ತಂದೆ ಮತ್ತು ಇತರರು ಸೇರಿ ಒಂದು ಖೊಟ್ಟಿ ದಾನ ಪತ್ರ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಜಮೀನಿನ ಉತಾರು ಈಗಲೂ ಕೂಡ ಶಿವನಗೌಡನ ಹೆಸರಿಗೆ ಇದೆ ಎಂದರೆ ನಿಜ. ನನ್ನ ಹೆಸರಿಗೆ ಅದು ಖಾತೆ ಬದಲಾವಣೆ ಆಗಿರುವುದಿಲ್ಲ. ದಾವಾ ಆಸ್ತಿಗಳಲ್ಲಿ ವಾದಿಗೆ ಅರ್ಧ ಹಿಸ್ಸೆ ಇದೆ ಎಂದರೆ ಸರಿಯಲ್ಲ. ಪ್ರತಿವಾದಿ 2 ರಿಂದ 4 ರವರು ಸಹ ದಾವಾ ಆಸ್ತಿಯಲ್ಲಿ ಅರ್ಧ ಹಿಸ್ಸೆ ಇದೆ ಎಂದರೆ ಸರಿಯಲ್ಲ. ನನಗೆ ದಾವೆ ಆಸ್ತಿಯಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ನಿಜ. ನನ್ನ ಘರಾಣೆದ ಬಗ್ಗೆನನಗೆ ಯಾವುದೇ ಮಾಹಿತಿ ಇಲದಿದ್ದರೂ ಆಸ್ತಿ ಎತ್ತಿಹಾಕಬೇಕು ಎಂಬ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಸೃಷ್ಟಿ ಮಾಡಿರುವ ದಾನ ಪತ್ರ ಖೊಟ್ಟಿ ದಾನ ಪತ್ರ ಎಂದರೆ ಸರಿಯಲ್ಲ

**ಮುಂದುವರೆದ_ಪಾಟೀ_ಸವಾಲುಃ**

ವಾದಿಯರ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತಾರೆ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.